# ಹೊಸ ದಿಶೆಯಲ್ಲಿ ರಿಷಾ ಹೆಜ್ಜೆ...



ಕನ್ನಡದೊಂದಿಗೆ ತೆಲುಗು, ತಮಿಳು ಸಿನಿಮಾಗಳಲ್ಲೂ ಸಕ್ರಿಯವಾಗಿರುವ ನಟಿ ರಿಷಾ ಗೌಡ, ತಮಿಳಿನ ಆ್ಯಕ್ಷನ್ ಸಿನಿಮಾವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದು, ಅದಕ್ಕಾಗಿ ಸಾಕಷ್ಟು ತಯಾರಿ ನಡೆಸಿದ್ದಾರೆ. 'ಬಿಗ್ ಬಾಸ್' ರಿಯಾಲಿಟಿ ಶೋ ನಂತರ ಹಲವು ಅವಕಾಶಗಳು ಅವರನ್ನು ಅರಸಿ ಬಂದಿದ್ದು, ಉತ್ತಮ ಕಥೆಗಳ ಭಾಗವಾಗುವ ಹಂಬಲ ವ್ಯಕ್ತಪಡಿಸುತ್ತಾರೆ.

■ ಎಸ್ಸೆನ್

◆ ಈಚೆಗೆ ನಿಮ್ಮ ಅಭಿನಯದ 'ಬೆಂಗಳೂರು ಇನ್' ಸಿನಿಮಾ ಬಿಡುಗಡೆಯಾಗಿದೆ. ಶಶಿಕುಮಾರ್, ಧರ್ಮ ಕೀರ್ತಿರಾಜ್ ಅವರ ಜೊತೆ ನಟಿಸಿದ ಅನುಭವ ಹೇಗಿತ್ತು?

'ಬೆಂಗಳೂರು ಇನ್' ಸಿನಿಮಾಗೆ ಮೂರು ವರ್ಷದ ಹಿಂದೆ ಸಹಿ ಹಾಕಿದ್ದು. ನನ್ನ ಮೊದಲ ಸಿನಿಮಾ 'ಕ್ರೇಜಿ ಕೀರ್ತಿ'. ಯಾವುದೇ ಕಲಾವಿದರಿಗೆ ಎರಡನೇ ಸಿನಿಮಾ ಒಂದು ರೀತಿ ಟರ್ನಿಂಗ್ ಪಾಯಿಂಟ್ ಇದ್ದಂತೆ. ಧರ್ಮ ಕೀರ್ತಿರಾಜ್ ಜೊತೆ ನನ್ನ ಎರಡನೇ ಸಿನಿಮಾ ಎಂದಾಗ ಖುಷಿಯಾಗಿತ್ತು. ಧರ್ಮ ಕೂಡ ಆಗ ಗುರುತಿಸಿಕೊಂಡಿದ್ದರು. ಹೀಗಾಗಿ ಖುಷಿಯಿಂದ ಒಪ್ಪಿದೆ. ಸಿನಿಮಾದಲ್ಲಿ ಉತ್ತಮವಾದ ಪಾತ್ರ ನಿರ್ವಹಿಸಿದ್ದೇನೆ.

ಶಶಿಕುಮಾರ್ ಅವರ ಸಿನಿಮಾಗಳನ್ನು ನೋಡಿಕೊಂಡು ಬೆಳೆದವಳು ನಾನು. ಅವರೊಂದಿಗೆ ನಟಿಸುತ್ತೇನೆ ಎಂದಾಗ ಭಯ, ಖುಷಿ, ಆತಂಕ ಎಲ್ಲವೂ ಆಗಿತ್ತು. ಆದರೆ ಅವರು ತುಂಬಾ ಸ್ನೇಹಪರವಾಗಿದ್ದರು. ನಟನೆಗೆ ಸಂಬಂಧಿಸಿದಂತೆ ಹಲವು ಸಲಹೆಗಳನ್ನು ನೀಡುತ್ತಿದ್ದರು. ಅತ್ಯುತ್ತಮ ಕಲಿಕೆ ಸಾಧ್ಯವಾಯಿತು.

◆ 'ಬಿಗ್ ಬಾಸ್' ನಂತರ ದಾರಿ ಸಾಗಿದ್ದು ಎಲ್ಲಿಗೆ?

'ಬಿಗ್ ಬಾಸ್' ನಂತರ ಹಲವು ಅವಕಾಶಗಳು ಬರುತ್ತಿವೆ. ಸದ್ಯ ತಮಿಳಿನಲ್ಲಿ 'ಆಶೀರ್ವಾದ್' ಎಂಬ ಆ್ಯಕ್ಷನ್ ಸಿನಿಮಾಗೆ ಸಹಿ ಹಾಕಿದ್ದೇನೆ. ಅದಕ್ಕಾಗಿ ತುಂಬಾ ತಯಾರಿ ನಡೆಸಿದ್ದೇನೆ. ಅದರಲ್ಲಿನ ಫೈಟ್– ಆ್ಯಕ್ಷನ್ ಸೀನ್‌ಗಳಿಗಾಗಿ ಆರು ಕೆ.ಜಿ. ಕಡಿಮೆ ಮಾಡಿಕೊಂಡಿದ್ದೇನೆ. 'ಬಿಗ್ ಬಾಸ್' ಕಾರ್ಯಕ್ರಮಕ್ಕೂ ಮುಂಚೆ ಒಪ್ಪಿಕೊಂಡಿದ್ದ ಕನ್ನಡದ 'ಪಿಂಗಾಕ್ಷ' ಹಾರರ್ ಸಿನಿಮಾ ಮಾಡುತ್ತಿದ್ದೇನೆ. ತೆಲುಗಿನಲ್ಲಿ 'ಮಗರಂ' ಬಿಡುಗಡೆಯಾಗುತ್ತಿದೆ. ತೆಲುಗಿನದ್ದೇ ಮತ್ತೊಂದು ಸಿನಿಮಾದಲ್ಲಿ ತೊಡಗಿಕೊಂಡಿದ್ದೇನೆ. ಕೆಲವು ಸಿನಿಮಾಗಳು ಮಾತುಕತೆ ಹಂತದಲ್ಲಿವೆ.

◆ ರಿಷಾ, ಸಿನಿಮಾ ಸ್ಕ್ರಿಪ್ಟ್‌ನಲ್ಲಿ ಬಯಸುವುದೇನು?

ಇಡೀ ಸಿನಿಮಾದಲ್ಲಿ ನಾನಿರಬೇಕು ಎಂದು ಬಯಸುವುದಿಲ್ಲ. ಒಂದರ್ಧ ಗಂಟೆ ನನ್ನನ್ನು ತೆರೆ ಮೇಲೆ ತೋರಿದರೂ ಜನ ನೆನಪಿಟ್ಟುಕೊಳ್ಳಬೇಕು. ಜನ, ನಾವು ಆರಿಸಿಕೊಳ್ಳುವ ಸ್ಕ್ರಿಪ್ಟ್‌ನಿಂದ ನಮ್ಮನ್ನು ಗುರುತಿಸುತ್ತಾರೆ. ಉದಾಹರಣೆಗೆ, ಪೂಜಾ ಗಾಂಧಿ ಅವರಿಗೆ 'ಮುಂಗಾರು ಮಳೆ' ಸಿನಿಮಾ, ಒಂದು ಟೈಟಲ್ ಕೊಟ್ಟಿತು. 'ಮುಂಗಾರು ಮಳೆ ಪೂಜಾಗಾಂಧಿ' ಎಂದೇ ನೆನಪಿಟ್ಟುಕೊಂಡಿದ್ದಾರೆ. ಆ ರೀತಿಯ ಕಥೆ, ಕೆಲಸ ಮಾಡಬೇಕು.

ನಾನು ಬರೀ ಗ್ಲಾಮರ್ ಮಾಡಲ್ಲ ಅಥವಾ ಒಂದೇ ರೀತಿಯ ಪಾತ್ರ ಮಾಡಲ್ಲ. ಪಾತ್ರದ ಉದ್ದೇಶವನ್ನು ಮೊದಲು ಗಮನಿಸುತ್ತೇನೆ. ಆ ಪಾತ್ರ ಜನರನ್ನು ತನ್ನೊಂದಿಗೆ ಕರೆದುಕೊಂಡು ಹೋಗುವಂತೆ ಮಾಡಬೇಕೆಂದು ಬಯಸುತ್ತೇನೆ. ಅದಕ್ಕೆ ನನ್ನ ಕೈಲಾದಷ್ಟು ಪ್ರಯತ್ನ ಮಾಡುತ್ತೇನೆ.

◆ ಯಾವ ರೀತಿಯ ಸಿನಿಮಾ ನಿಮ್ಮ ಇಷ್ಟದ ಲಿಸ್ಟ್‌ನಲ್ಲಿದೆ?

ನನಗೆ ಆ್ಯಕ್ಷನ್ ಸಿನಿಮಾ ಬಹಳ ಇಷ್ಟ. ಹೀಗಾಗಿ ತಮಿಳಿನಲ್ಲಿ ಆ್ಯಕ್ಷನ್ ಸಿನಿಮಾ ಒಪ್ಪಿಕೊಂಡು, ಬಹಳ ಒತ್ತು ಕೊಟ್ಟು ನಟಿಸುತ್ತಿದ್ದೇನೆ. ಹುಡುಗಿಯರು ಫೈಟ್ ಮಾಡುವುದೇ ಬಹಳ ಕಡಿಮೆ. ಈ ಸಿನಿಮಾ ಪೂರ್ಣ ಪ್ರಮಾಣದಲ್ಲಿ ಆ್ಯಕ್ಷನ್ ಸಿನಿಮಾ, ಹಾಲಿವುಡ್ ರೀತಿ ಇದೆ. ಥ್ರಿಲ್ಲರ್ ಸಿನಿಮಾವನ್ನೂ ಮಾಡಬೇಕು ಎಂದಿದೆ. ಜನರನ್ನು ಕುತೂಹಲದಿಂದ ಕೂರಿಸಬೇಕು– ಅಂಥ ಸಿನಿಮಾಗಳು ಇಷ್ಟ.

◆ ಈಚೆಗೆ ಭರತನಾಟ್ಯ ಅಭ್ಯಾಸ ಆರಂಭಿಸಿದ್ದೀರಾ...

ಭರತನಾಟ್ಯ ಕಲಿಯಬೇಕೆಂದು ಆಸೆ ಶುರುವಾಯಿತು. ಪ್ರಯತ್ನಿಸಿಯೇ ಬಿಡೋಣ ಎಂದು ಕಲಿಕೆಗೆ ಮುಂದಾದೆ. ಭರತನಾಟ್ಯ ಒಂದೊಳ್ಳೆಯ ಥೆರಪಿ ಎನ್ನಿಸಿತು. ಇದು ನಮ್ಮ ಸಂಸ್ಕೃತಿಯ ಭಾಗವೂ ಹೌದು. ಮುಂದೊಂದು ದಿನ ಬೇರೆ ದೇಶಕ್ಕೆ ಹೋಗಿ ಅಲ್ಲಿ ಭರತನಾಟ್ಯವನ್ನು ಪ್ರದರ್ಶಿಸಬೇಕು, ನಮ್ಮ ಕಲೆಯನ್ನು ಎತ್ತಿಹಿಡಿಯಬೇಕು ಎಂಬುದು ನನ್ನ ಆಸೆ.

◆ 'ಬಿಗ್ ಬಾಸ್'ನಿಂದ ಕಲಿತ ಪಾಠ?

ಜೀವನದಲ್ಲಿ 'ಈಸಿ ಟು ಗೋ ಗರ್ಲ್' ರೀತಿ ಇದ್ದೆ. ಯಾವುದಕ್ಕೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಅಲ್ಲಿನ ಸಂದರ್ಭಗಳು, ಪರಿಸ್ಥಿತಿಗಳು ಸಾಕಷ್ಟು ಕಲಿಕೆ ನೀಡಿವೆ. ಬದಲಾವಣೆಗೆ 'ಬಿಗ್ ಬಾಸ್' ಒಳ್ಳೆಯ ವೇದಿಕೆ. ■